ನೋಡಿದ. ಅವರು ನಗಾಡಿದರು. ಹಿರಿಯತ್ತೆ ಕೈ ಬೀಸಿದಳು. ಒಬ್ಬೊಬ್ಬರೂ ಒಂದೊಂದು ಸನ್ನೆ ಮಾಡಿದರು. ಬೆಚ್ಚಿ ಬೆದರಿ ಒಳಗೊಳಗೆ ಬೆವೆತು ಹೋದ. ಉತ್ಸಾಹ ಪಾತಾಳಕ್ಕಿಳಿದಿತ್ತು. ಮಾತು ನಿಂತು ಹೋಗಿದ್ದವು. ಎದೆಯ ಏದುಸಿರು ಹೆಚ್ಚಾಯಿತು. ಅವರು ಅವನ ಬಾಲ್ಯಕಾಲದ ಅತ್ತೆಯರಾಗಿದ್ದರು. ಅವನು ಕೈಗೆ ಸಿಗಲಿ; ಸರಿಯಾದ ಪಾಠ ಕಲಿಸುತ್ತೇವೆ ಎಂದು ಜೋರು ಮಾಡಿದ್ದರು. ನಮ್ಮನ್ನು ಸೂಳೆಯರು ಎಂದು ಕಥೆ ಬರೆದನೇ ಈ ಮಗಾ ಎಂದು ನೊಂದುಕೊಂಡಿದ್ದರು. ನಮ್ಮ ಕೈಯಲ್ಲಿ ಬೆಳೆದವನೇ ನಮ್ಮನ್ನು ಸೂಳೆಯರು ಎಂದುಬಿಟ್ಟನೇ... ನಾವು ನಿಜವಾಗಿಯೂ ಸೂಳೆಯರೇ ಎಂದು ಸಂಕಟಪಟ್ಟದ್ದರು. ಬಾ ಇತ್ತ ಎಂದು ಕೈಬೀಸಿದರು. ನೀವು ಯಾರೋ ಗೊತ್ತಿಲ್ಲ ಎಂಬಂತೆ ನಟಿಸಿದ. ಹೆದರಿಬಿಟ್ಟ ಕಣೇ ಎಂದು ಅತ್ತೆಯರು ನಗಾಡುತ್ತಿದ್ದರು. ಅವರು ಇವನ ಹತ್ತಿರ ಬಂದರು. ಓಡಿ ಹೋಗಬೇಕೆನಿಸಿತು. ಎಲ್ಲೂ ಜಾಗ ಇರಲಿಲ್ಲ. ಏನಾಯ್ತು ಎಂದು ಹುಡುಗಿಯರು ಗಾಬರಿಗೊಂಡರು. ನೀರು ಕುಡಿದ. ಅವರು ಹತ್ತಿರವೇ ಬಂದು ಬೆನ್ನ ಹಿಂದೆ ನಿಂತಿದ್ದರು. ಕುಸಿದು ಕೂತ. ಹುಡುಗಿಯರ ನಡುವೆ ಅವಿತುಕೊಂಡ. ಮುಖ ಮುಚ್ಚಿದ. ಏನಿಲ್ಲಾ... ಸುಸ್ತಾಯ್ತು. ಬಸ್ಸು ಇನ್ನೂ ಬಂದಿಲ್ಲವಲ್ಲಾ; ನಿಂತು ಕಾದು ಸಾಕಾಯ್ತು ಎಂದ. ಬೆವರು ಒರೆಸಿಕೊಳ್ಳುತ್ತಲೇ ಇದ್ದ.

ಹತ್ತಿರದಿಂದ ಕದ್ದು ಅತ್ತೆಯರ ನೋಡಿದ. ಸೋರಿ ಹೋಗಿದ್ದರು. ತನ್ನ ಮಾನ ತೆಗೆಯುವರು ಎಂದು ನಡುಗುತ್ತಿದ್ದ. ಅತ್ತೆಯರು ಸುಮ್ಮನೆ ತುಟಿಯಲ್ಲೇ ನಗುತ್ತಿದ್ದರು. ಮಾತಾಡಿಸಿಯೇ ಬಿಡುವ ಎಂದು ಕಿರಿ ಅತ್ತೆ ಹತ್ತಿರ ಬರುತ್ತಿದ್ದಳು. ಹಿರಿಯತ್ತೆ ತಡೆಯುತ್ತಿದ್ದಳು. ಸಂದರ್ಭವ ಅರ್ಥಮಾಡಿಕೊಂಡು ಅತ್ತ ಕಲ್ಲು ಬೆಂಚಿನ ಮೇಲೆ ಕೂತರು. ಸತ್ತು ಹೋಗಬೇಕು ಎನಿಸುತ್ತಿತ್ತು. ಅವನೆಂದೂ ತನ್ನ ಅತ್ತೆಯರನ್ನು ಸೂಳೆ ಎಂದು ಕರೆದಿರಲಿಲ್ಲ. ಕಥೆಯ ಪಾಡಲ್ಲಿ ಅವರ ಬದುಕನ್ನು ಆತ ಸೂಕ್ಷ್ಮವಾಗಿ ಅಂತಃಕರಣದಲ್ಲಿ ಚಿತ್ರಿಸಿದ್ದ. ಸೂಳೆಯರ ಕಥೆ ಬರೆದಿದ್ದಾನೆಂದು ಚಾಡಿ ಹೇಳಿ ಅಪಪ್ರಚಾರ ಮಾಡಿದ್ದರು. ಆ ಅತ್ತೆಯರು ಅತ್ತ ಹೊರಟು ಮರದ ಕೆಳಗೆ ನಿಂತು ಅವನನ್ನೇ ಗಮನಿಸುತ್ತಿದ್ದರು. ಆ ಕ್ಯಾಂಪಸ್ಸಿನ ಬಸ್ಸು ಬಂತು. ಚಂಗನೆ ಜಿಗಿದು ಹಾರಿ ಹೋದಂತೆ ಹೋಗಿ ಬಸ್ಸು ಹತ್ತಿ ಕಿಟಕಿಯ ಬಳಿ ಕೂತು ಗಾಜು ಎಳೆದುಕೊಂಡ. ಅಯ್ಯೋ; ಏನಾಯ್ತು ನಿಮಗೆ... ಈ ಪರಿ ಬೆದರಿದ್ದೀರಲ್ಲಾ ಎಂದು ಜೊತೆಗಿದ್ದವರು ವಿಚಾರಿಸಿದರು. ಅವರು ಸುತ್ತುವರಿದು ತನ್ನ ರಕ್ಷಿಸಲಿ ಎಂಬಂತೆ ಆತ ಚಡಪಡಿಸಿ, ಬಸ್ಸು ಹೊರಡಲು ಹೇಳಿ ಎಂದು ಕಂಡಕ್ಟರ್ ಮೇಲೆ ರೇಗಿದ. ಅವನ ಅತ್ತೆಯರು ಬಸ್ಸಿನ ಕಿಟಕಿಯ ಹತ್ತಿರವೇ ಬಂದು ನಿಂತು ನಕ್ಕರು. ಅವರ ನಗುವೇ ಸತ್ತು ಆ ನಗುವಿನ ಹೆಣ ಅವರ ಮೋರೆಯಲ್ಲಿ ಹಲ್ಲುಕಿರಿದಂತಾಯಿತು. ಭಯಗೊಂಡು ಗಾಜನ್ನು ಮತ್ತೆ ಬಲವಾಗಿ ಎಳೆದು ಅತ್ತ ಮುಖ ತಿರುವಿದ. ಅತ್ತೆಯರು ಅವನನ್ನು ಕರೆಯುತ್ತಿದ್ದರು. ನೋಡಿ ಮಾತಾಡಿಸುವ ಧೈರ್ಯ ಬರಲಿಲ್ಲ. ಯಾರೋ ಕರೆಯುತ್ತಿದ್ದಾರೆ ಎಂದರು. ಅವರು ನನಗೆ ಗೊತ್ತಿಲ್ಲ ಎಂದ. ಬಸ್ಸು ಹೊರಟಿತು. ಒಳಗೆ ಮಾತ್ರ ಅವರು ನನ್ನ ಅತ್ತೆಯರು... ತಾಯಂತಹ ಅತ್ತೆಯರು ಎಂದು ಬಸ್ಸು ಮುಖ್ಯ ರಸ್ತೆಗೆ ತಿರುಗುತ್ತಿದ್ದಂತೆಯೆ ಅವರತ್ತ ತಿರುಗಿ ನೋಡಿದ. ಆ ಅತ್ತೆಯರು ಕೈ ಬೀಸಿ ನಗುತ್ತಲೇ ಇದ್ದರು. ಅವನಿಗೆ ನಗಲು ಸಾಧ್ಯವಾಗಲಿಲ್ಲ. ಅವನ ತಲೆ ಕೆಟ್ಟುಹೋಗಿತ್ತು. ಮತ್ತೆ ಇಲ್ಲಿಗೆ ಬರಬಾರದು ಎಂದು ಯಾರ್‍ಯಾರದೋ ಮುಂದೆ ಕೈಮುಗಿದು ಗಂಗೋತ್ರಿ ಕ್ಯಾಂಪಸ್ಸಿನಲ್ಲೇ ಕೆಲಸ ಕಂಡುಕೊಂಡ. ವರ್ಷಗಳ ಉರುಳಿದವು. ಮದುವೆ ಆದ. ಮೊದಲ ಮಗು ಹುಟ್ಟಿತು. ಆ ಮಗುವಿನ ತಲೆ ಮುಡಿಯ ಕೊಡಬೇಕಾಗಿ ಬಂತು. ಆತ ಹಳ್ಳಿಯನ್ನೇ ಬಿಟ್ಟುಬಿಟ್ಟದ್ದ. ಹೆಂಡತಿಯನ್ನು ಹಳ್ಳಿಗೆ ಕಳಿಸಿದ. ಮುಡಿ ಕೊಟ್ಟಾಯಿತು. ಅಲ್ಲಿ ಆ ಹಳ್ಳಿಯಲ್ಲಿ ತನ್ನ ಅತ್ತೆಯರು ಇರುತ್ತಾರೆ... ಅವರಿಗೆ ನನ್ನ ಮಗಳ ತೋರಿಸು... ಅವರ ಪೋಟೊ ತೆಗೆದುಕೊಂಡು ಬಾ ಎಂದು ಆತ ಹೆಂಡತಿಗೆ ಹೇಳಿದ್ದ. ಕೊನೆಯಲ್ಲಿ ಆ ಅತ್ತೆಯರು ಎಲ್ಲಿದ್ದಾರೆ ಎಂದು ಕೇಳಿದ್ದಳು. ಫೋಟೊ ತೆಗೆಯಲು ಕಾತರಿಸಿದ್ದಳು. ಅಯ್ಯೋ; ಅವರ ಯಾಕೆ ನೋಡ್ತಿಯೇ ಬಿಡವ್ವಾ; ಪಾಪಿಗಳ ಮುಖ ನೋಡಬಾರದು... ಅಂತವರ ಕೈಗೆ ಮಗುವ ಕೊಡಬಾರದು ಎಂದು ಹೆಂಗಸರು ಹಿಂಜರಿದರು. ಅವನ ಮುಗ್ಧ ಹೆಂಡತಿ ಯಾಕೆ... ಮಗುವಿಗೆ ಅವರು ಆಶೀರ್ವದಿಸಲಿ ಎಂದು ನನ್ನ ಗಂಡ ಹೇಳಿದ್ದಾನೆ. ದೇವರ ಈ ಪ್ರಸಾದವ ಅವರಿಗೆ ಕೊಡೋಣ ಎಂದು, ಆ ಅತ್ತೆಯರಿದ್ದ ಗುಡಿಸಲ ಮುಂದೆ ಹೋದಳು. ಅಲ್ಲಿ ಆ ಹಿರಿ ಅತ್ತೆ ಸವೆದು ಸಮಾಧಿಯಿಂದ ಎದ್ದು